# ಪಾಠ–7

## ದೋಷ ಪರಿಹಾರ ಪ್ರಕಟಿಸಲಾಯಿತು – ಭಾಗ 2

### ಮೂಲ:– ಬ್ರೂಸ್ ಎನ್ ಕ್ಯಾಮರಾನ್ ಜೆಡಿ, ಅನುವಾದ: ಪಾಸ್ಟರ್ ಚೇಲುವರಾಜು.

**ಪೀಠಿಕೆ:** ಕಳೆದ ವಾರ, ಪ್ರಪಂಚದಲ್ಲಿರುವ ಧರ್ಮಗಳಲ್ಲಿ ಮೂರು ದೊಡ್ಡ ಧರ್ಮಗಳು ಹಳೇ ಒಡಂಬಡಿಕೆ ದೇವರ ಸ್ಪೂರ್ತಿಯಿಂದ ಬಂದ ಮಾತುಗಳೆಂದು ನಂಬಿರುವುದನ್ನು ಕಂಡೆವು ಹೀಗಾಗಿ ಈ ಧರ್ಮಗಳು ಪಾಪದ ವಿಷಯದಲ್ಲಿ ಹಳೇ ಒಡಂಬಡಿಕೆಯ ವಿಧಿವಿಧಾನಗಳನ್ನು ಅನುಸರಿಸಿರುವುದನ್ನು ತಿಳುಕೊಂಡೆವು ಅದು ಇತಿಹಾಸ. ಈವತ್ತಿನ ಸಂಗತಿಯೇನು? ಮುಂದೆ ನಡೆಯಲಿರುವುದೇನು? ಹಳೇ ಒಡಂಬಡಿಕೆಯ ಪರ್ಣಶಾಲೆ ವಿಧಿವಿಧಾನಗಳು ಯೇಸುಸ್ವಾಮಿಯವರ ಇಂದಿನ ಕೆಲಸಗಳನ್ನು ಕುರಿತು ಏನು ಹೇಳುತ್ತವೆ? ಪಾಪದ ಸಮಸ್ಯೆಯ ಬಗ್ಗೆ ಹೇಳುವುದೇನು? ಯೇಸುಸ್ವಾಮಿ ನಮ್ಮ ಪಾಪದ ವಿಷಯದಲ್ಲಿ ಏನು ಮಾಡುತ್ತಿದ್ದಾರೆ ಅಥವಾ ಅವರ ಕೆಲಸ ಈಗಾಗಲೇ ಮುಗಿದು ಹೋಗಿದೆಯೇ? ಅವರೀಗ ನಿವೃತ್ತಿಯ ಜೀವನವನ್ನು ಸಂತೋಷದಿಂದ ಕಳೆಯುತಿದ್ದಾರೆಯೇ ಈ ವಿಷಯವನ್ನು ಕುರಿತು ಸ್ವಲ್ಪ ಹೊತ್ತು ಅಳವಾದ ಸತ್ಯವೇದ ಅಧ್ಯಯನ ನಡೆಸೋಣ.

### I ದೋಷಪರಿಹಾರಕ ದಿನ:

(ಅ) ಯಾ.ಕಾ 16 : 1–2 ನ್ನು ಓದಿಕೊಳ್ಳಿ. ದೇವರ ಮುಂದೆ ಪ್ರಾರ್ಥನೆ ಮಾಡಲು ಬರಬೇಕಾದ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆ? ಈ ವಾಕ್ಯಗಳು ಪ್ರಾರ್ಥನೆಯನ್ನು ಕುರಿತು ಮಾತನಾಡುತ್ತಿವೆಯೇ? (ಇಲ್ಲ ಈ ವಾಕ್ಯಗಳು ಬೇರೆ ವಿಷಯವೊಂದನ್ನು ಕುರಿತು ಮಾತನಾಡುತ್ತ ಪ್ರಾಣಿ ಬಲಿಕೊಡುತ್ತಿದ್ದ ಪರ್ಣಶಾಲೆಯಲ್ಲಿ ಎರಡು ವಿಭಾಗಗಳಿದ್ದವು ಒಂದು "ಪರಿಶುದ್ದ ಸ್ಥಳ" ಮತ್ತು ಇನ್ನೊಂದು" ಮಹಾಪರಿಶುದ್ದ ಸ್ಥಳ"

ಒಂದು ತೆರೆ ಈ ಎರಡೂ ವಿಭಾಗಗಳನ್ನು ಪ್ರತ್ಯೇಕಗೋಳಿಸಿತ್ತು ದೇವರು ತಾನೆ ಅತಿ ಪರಿಶುದ್ಧ ಸ್ಥಳದಲ್ಲಿ ಕಾಣಿಸಿಕೊಳ್ಳುವುದಾಗಿ ಹೇಳಿದರು. ಆತನ ಸನ್ನಿಧಾನವನ್ನು ಅಕ್ರಮವಾಗಿ ಪ್ರವೇಶಿಸಿದ ಮನುಷ್ಯ ಮರಣಿಸುತ್ತಿದ್ದನು)

1) ಆರೋನ ತನಗೆ ಮನುಸ್ಸು ಬಂದಾಗಲೆಲ್ಲಾ ಅತಿ ಪರಿಶುದ್ದ ಸ್ಥಳವನ್ನು ಪ್ರವೇಶಿಸಬಾರದೆಂದು ದೇವರು ಹೇಳಿದ್ದರು ಆತ ಯಾವಾಗ ಆ ಸ್ಥಳವನ್ನು

ಪ್ರವೇಶಿಸಬಹುದಾಗಿತ್ತು? [ಯಾ.ಕಾ 23 : 26–28 ನ್ನು ಮತ್ತು ವಿ.ಕಾ 30 : 10 ನ್ನು ಓದಿಕೊಳ್ಳಿ ವರ್ಷಕ್ಕೊಮ್ಮೆ "ದೋಷಪರಿಹಾರಕ ಮಹಾದಿನ" ಒಂದುಂಟು ಆ ದಿನದಂದು ಮಾತ್ರ ಆರೋನ ಅತಿಪರಿಶುದ್ದ ವಿಭಾಗಕ್ಕೆ ಹೋಗಬಹುದಾಗಿತ್ತು]

2) ಪ್ರಾಣಿ ಬಲಿಕೊಟ್ಟ ಮುನುಷ್ಯನ ಪಾಪಗಳಿಗೆ, ಬಲಿಪಶುವಿನ ರಕ್ತ ಹೇಗೆ ದೋಷಪರಿಹಾರ ಮಾಡಿತು ಎಂಬುದನ್ನು ಕುರಿತು ಕಳೆದ ವಾರ ಚರ್ಚೆಮಾಡಿದ್ದೆವು , ಈ " ದೋಷಪರಿಹಾರಕ ಮಹಾದಿನ" ಮೇಲಿನ ಚಿತ್ರಣದಲ್ಲಿ ಅಳವಡಿಸಲ್ಪಡುವದು ಹೇಗೆ?

ಆ) ಯಾ. ಕಾ 16 : 11–14 ನ್ನು ಓದಿಕೊಳ್ಳಿ ಆರೋನ "ತೆರೆಯನ್ನು ದಾಟಿ" ಹೋದನು ಎಂದು ಹೇಳುವುದರ ಅರ್ಥವೇನು? ಯಾಜಕ ಕಾಂಢದ ಈ ಅಧ್ಯಾಯ ದೋಷರಿಹಾರಕ ಮಹಾದಿನವನ್ನು ಕುರಿತು ಎಲ್ಲಾ ವಿವರಗಳನ್ನು ನೀಡುತ್ತದೆ ತೆರೆಯನ್ನು ದಾಟಿ ಹೋಗುವಿಕೆ, ದೋಷಪರಿಹಾರಕ ಮಹಾದಿನದಂದು ಅತಿಪರಿಶುದ್ದ ಸ್ಥಳದ ಪ್ರವೇಶವನ್ನು ಸೂಚಿಸುತ್ತವೆ ಈ ಒಂದು ಸಂದರ್ಭದಲ್ಲಿ ಮಾತ್ರ ಮಹಾಯಾಜಕ ಆ ಸ್ಥಳವನ್ನು ಪ್ರವೇಶಿಸಬಹುದಾಗಿತ್ತು.]

1) ದೋಷಪರಿಹಾರಕ ಮಹಾದಿನದಂದೇ ಈ ಪ್ರಾಣಿಯನ್ನು ಬಲಿಕೊಟ್ಟುದ್ದು ಏಕೆ? [ಮಹಾಯಾಜಕ ಮತ್ತು ಆತನ ಕುಟುಂಬದವರ ಪಾಪಸಂಬಂದ ದೋಷಗಳ ಪರಿಹಾರಕ್ಕಾಗಿ ಈ ಬಲಿ ಕೊಡಲಾಯಿತು.]

ಇ) ಯಾ.ಕಾ 16:15–17 ನ್ನು ಓದಿಕೊಳ್ಳಿ ದೋಷಪರಿಹಾರಕ ಮಹಾದಿನದಂದು ಮತ್ಯಾವ ದೋಷಗಳನ್ನು ಪರಿಹಾರ ಮಾಡುತ್ತಿದ್ದರು? [ಅಂದು ಏನು ನಡೆಯಲಿದೆಯೋ ಅದೆಲ್ಲರ ಸಾರಾಂಶವನ್ನು ಈ ವಾಕ್ಯಗಳಲ್ಲಿ ಕಾಣಬಹುದು ಈ ವಾಕ್ಯಗಳು " ಪಾಪದ ಮೊನಚನ್ನು" ಸೆರೆಹಿಡಿದಿವೆ. ಒಬ್ಬ ಮನುಷ್ಯ ತನ್ನ ಪಾಪದ ಸಲುವಾಗಿ ಒಂದು ಪ್ರಾಣಿಯನ್ನು ಬಲಿಕೊಟ್ಟಾಗ, ಪ್ರಾಣಾಧಾರ ಸಂಕೇತವಾದ ಆ ಪ್ರಾಣಿಯ ರಕ್ತ ಆ ವ್ಯಕ್ತಿಯ ಪಾಪಗಳನ್ನು ಸಂಪೂರ್ಣವಾಗಿ ಶುಚಿಗೊಳಿಸುತ್ತದೆ, ಈ ರಕ್ತವನ್ನು ತೆಗೆದುಕೊಂಡು ಹೋಗಿ ಪರ್ಣಶಾಲೆಯೊಳಗೆ ಚಿಮುಕಿಸುವಾಗ ಆ ವ್ಯಕ್ತಿಯ ಪಾಪ ಸಾಂಕೇತಿಕವಾಗಿ ಆಲಯವನ್ನು ಪ್ರವೇಶಿಸುತ್ತದೆ ದೋಷಪರಿಹಾರಕ ಮಹಾದಿನದಂದು, ಜನರ ಪಾಪ ( ಮತ್ತು ಮಹಾಯಾಜಕನ ಪಾಪ) ಪರಿಶುಧ್ದ ಸ್ಥಳಕ್ಕೆ ಸ್ಥಳಾಂತಿರಿಸಲಾಯಿತು ಕೊನೆಯಲ್ಲಿ ಇಡೀ ಸಮುದಾಯ ಮತ್ತು ಪರ್ಣಶಾಲೆ ಪಾಪದಿಂದ ತೊಳೆಯಲ್ಪಟ್ಟು ಪರಿಶುದ್ದವಾಯಿತು.)

1) ಸ್ವಲ್ಪ ಪ್ರಾಯೋಗಿಕವಾಗಿ ಚಿಂತೆ ಮಾಡೋಣ ನೀವು ದೂಳುತುಂಬಿದ ರಸ್ತೆಯಲ್ಲಿ ಓಡಾಡಿ ಹಾಗೆ ಮನೆಗೆ ಹೋಗಿದ್ದೀರಿ ಮನೆಯೊಳಗೆಲ್ಲಾ ನಡೆದಿದ್ದೀರಿ ಮನೆಯೊಳಗೆ ಹಾಸಿದ್ದ ಕಾರ್ಪೆಟ್ ಎಲ್ಲಾ ಮಣ್ಣು ಮಣ್ಣು ಈಗ ನೀವೇನು ಮಾಡುತ್ತೀರಿ? ವ್ಯಾಕ್ಯುಮ್ ಕ್ಲೀನರ್

ತೆಗೆದುಕೊಂಡು ಕಾರ್ಪೆಟ್ ಕ್ಲೀನ್ ಮಾಡುತ್ತೀರಿ, ನಿಮ್ಮ ಬ್ಯಾಗಿನಲ್ಲಿ ದೂಳು ತುಂಬಿಕೊಂಡಿದ್ದರೆ ಅದನ್ನೆಲ್ಲಾ ಹೊರಗೆ ಜಾಡಿಸುತ್ತೀರಿ ನಂತರ ಎಲ್ಲಾ ಕಸವನ್ನು ಕಸದ ಡಬ್ಬಿಗೆ ಸುರಿಯುತ್ತೀರಿ ಹೀಗೆ ಪಾಪ ಸಹ ಹೊರಹಾಕಲ್ಪಡುವ ಒಂದು ಪ್ರಯಾಣದಲ್ಲಿದೆ.

ಈ) ಯಾ.ಕಾ 16: 20–22 ನ್ನು ಓದಿಕೊಳ್ಳಿ ಆ ವರ್ಷವೆಲ್ಲಾ ಮಾಡಿದ ಪಾಪದ ಅಂತ್ಯ ಫಲವೇನು? "ಪಾಪದ ಮೊನಚು" ಎಲ್ಲಿ ಕೊನೆಗೊಳ್ಳುತ್ತದೆ? [ಎಲ್ಲಾ ಪಾಪಗಳನ್ನು ಹೋತದ ತಲೆಯ ಮೇಲೆ ಹೊರಿಸಿ ಅದನ್ನು ಅರಣ್ಯಕ್ಕೆ ಕಳುಹಿಸಿ ಬಿಡುತ್ತಿದ್ದರು ಈಗ ಪಾಪ ಇಸ್ರಾಯೇಲ್ಯರ ಸಮುದಾಯದಿಂದ ಹೊರಹಾಕಲ್ಪಟಿತು.]

1) ಈ ದೋಷಪರಿಹಾರಕ ಮಹಾದಿನದ ಅಲೋಚನೆಯಲ್ಲಿ ಹೋತ ಹೇಗೆ ತಾರ್ಕಿಕವಾಗಿ ಹೊಂದಿಕೊಳ್ಳುತ್ತದೆ ಈ ಹೋತ ಕೊಲ್ಲಲ್ಪಡುವುದಿಲ್ಲ ಪಾಪಕ್ಕಾಗಿ ಇದರ ರಕ್ತ ಸುರಿಯಲ್ಪಡಲಿಲ್ಲ [ ಮತ್ತಾಯ 4 : 1 ಮತ್ತು ಧ. ಕಾ 32 : 9–10 ನ್ನು ಓದಿನೋಡಿ ಸೈತಾನನು ವಾಸಿಸುವ ಸ್ಥಳಗಳನ್ನು ಮರಳುಗಾಡು ಮತ್ತು ಅರಣ್ಯ ಪ್ರದೇಶಗಳು ಪ್ರತಿನಿಧಿಸಿವೆ ದೇವರಿಲ್ಲದ ಸ್ಥಳವದು " ಪಾಪ ಕಳುಹಿಸಲ್ಪಟ್ಟವನ ಬಳಿಗೆ ಹಿಂತಿರುಗಿದ " ಮನಸ್ಸಿನ ಚಿತ್ರ ನನ್ನಲ್ಲಿ ಮೂಡಿದೆ ಎಲ್ಲಿ ಆರಂಭವಾಯಿತೋ ಅಲ್ಲಿಗೆ ಹಿಂತಿರುಗಿ ಬಂದಿದೆ ಹೋತ ನಿಮ್ಮ ಮನೆಯ ಕಸದ ತೊಟ್ಟಿ ಇದ್ದ ಹಾಗೆ ಅದರಲ್ಲಿರುವುದೆಲ್ಲಾ ಕೊನೆಗೆ ಅವಸಾನ ಸ್ಥಳಕ್ಕೆ ಒಯ್ಯಲ್ಪಡುವದು.]

2) ದೋಷಪರಿಹಾರಕ ಮಹಾದಿನದಂದು ಏನು ನಡೆಯಿತೋ ಅದಕ್ಕೆಲ್ಲಾ ಸಾಕಷ್ಟು ವಿವರಣೆ ಹಾಗೂ ಸಂಕೇತಗಳ ಮೇಲ್ಮಯ್ಯನ್ನು ಮಾತ್ರ ನಾವು ನೊಡಿದ್ದೇವೆ ಈ ಸಂಕೇತಗಳನ್ನು ಇನ್ನೂ ಆಳವಾಗಿ ಅಧ್ಯಾಯನ ಮಾಡುವವದಕ್ಕೆ ಬದಲು ಈವತ್ತು ಯೇಸುಸ್ವಾಮಿಯೊಂದಿಗಿನ ನಮ್ಮ ಸಂಬಂಧವನ್ನು ಕುರಿತು ಈ ಸಂಕೇತಗಳು ಏನು ಹೇಳತ್ತಿವೆ ಎಂಬುದರ ಕಡೆಗೆ ನಮ್ಮ ಗಮನವನ್ನು ಹರಿಸೋಣ

## II ದೋಷ ಪರಿಹಾರಕ ಮಹಾದಿನದ ಪ್ರವಾದನೆ

ಅ) ಯಾಜಕಕಾಂಡದಲ್ಲಿ ನಾವು ಏನನ್ನು ಕಲಿತುಕೊಂಡೆವೋ ಅವುಗಳ ಸಾರಾಂಶವನ್ನು ಇಬ್ರಿಯ 9 : 1–7 ರಲ್ಲಿ ನೋಡಬಹುದು ಇಬ್ರಿಯ 9 : 8 ನ್ನು ಓದಿನೋಡಿ ಹಳೇ ಒಡಂಬಡಿಕೆಯಲ್ಲಿರುವ ಪರ್ಣಶಾಲೆ ವಿಧಿವಿಧಾನಗಳನ್ನು ಕುರಿತು ಇಬ್ರಿಯರ ಪುಸ್ತಕ ಏನು ಹೇಳುತ್ತದೆ? [ ದೇವರು ಪಾಪವನ್ನು ಕುರಿತು ನಮಗೆ ಪಾಠ ಕಲಿಸುತ್ತಿದ್ದಾರೆ.]

1) ದೇವರು ನಮಗೆ ಇಲ್ಲಿ ಕಲಿಸುತ್ತಿರುವುದೇನು? [ ಈ ಭೂಮಿಯ ಮೇಲೆ ಇನ್ನೂ ಆ ಪರ್ಣಶಾಲೆಯ ವ್ಯವಸ್ಥೆ ಇದ್ದಿದ್ದರೆ ನಾವು ಆ ದೋಷಪರಿಹಾರಕ ಮಹಾದಿನದ ಅಂತ್ಯವನ್ನು ಕಾಣಲಾಗದು.]

2) ಇಬ್ರಿಯರ ಪುಸ್ತಕ, " ಗುಡಾರದಲ್ಲಿ ಮುಂದಣ ಭಾಗವು ಇರುವ ತನಕ ದೇವರ ಸಮಕ್ಷಮಕ್ಕೆ ಹೋಗುವ ಮಾರ್ಗವು ಇದುವರೆಗೂ ಪ್ರಕಟವಾಗಲಿಲ್ಲ" ಎಂದು ಹೇಳುವುದು ಹೇಗೆ? ಏಕೆಂದರೆ ಆ ಸ್ಥಳ ತೆರೆಯ ಆಚೆಗಿತ್ತಷ್ಟೆ. [ಆರೋನನು ಮನಸು ಬಂದಾಗಲೆಲ್ಲ ತೆರೆಯೊಳಗೆಡೆ ಹೊಗಬಾರದು ಏಕೆಂದರೆ ತೆರೆಯೊಳಗೆ ದೇವರಿರುವುದರಿಂದ ಆತನಿಗೆ ಸಾವಾಗಬಹುದು ಎಂಬ ವಿಷಯವನ್ನು ಜ್ಞಾಪಿಸಿಕೊಳ್ಳಿ ಪಾಪಿ ದೇವರ ಬಳಿಸಾರುವದು ಹೇಗೆ ಎಂಬುದು ನಮಗಿನ್ನೂ ಪ್ರಕಟವಾಗಿಲ್ಲ ಎಂಬುದನ್ನು ಇದು ಸೂಚಿಸುತ್ತದೆ ಪಾಪದಿಂದ ಪರಿಶುದ್ಧಗೊಳ್ಳುವ ಪ್ರಕ್ರಿಯೆ ಇಲ್ಲಿ ಇನ್ನೂ ಸ್ಪಷ್ಟವಾಗಿ ಅರ್ಥವಾಗಿಲ್ಲ.]

i) ಈ ವೈಚಿತ್ರಕ್ಕೂ ಭೂಮಿಯ ಮೇಲಿನ ಪರ್ಣಶಾಲೆಯ ನಾಶಕ್ಕೂ ಏನು ಸಂಬಂಧ? [ಯೇಸುಸ್ವಾಮಿ ಮೆಸ್ಸಿಯನಾಗಿ ತ್ಯಾಗಬಲಿಯಾಗುವುದರ ಸಂಕೇತವೇ ಹಳೆಯ ಒಡಂಬಡಿಕೆಯ ಬಲಿ ವಿಧಾನಗಳು ಎಂಬುದನ್ನು ಕಳೆದವಾರ ನಾವು ಕಲಿತುಕೊಂಡೆವು ಭೂಮಿಯ ಮೇಲೆ ಪರ್ಣಶಾಲಾ ವ್ಯವಸ್ಥೆ ಇನ್ನೂ ಇದಿದ್ದರೆ ಯೇಸುಸ್ವಾಮಿ ಯಾವ ಕಾರ್ಯಕ್ಕಾಗಿ ಈ ಭೂಮಿಗೆ ಬಂದರೋ ಅದು ಸಂಪೂರ್ಣಗೊಳ್ಳುತ್ತಿರಲಿಲ್ಲ.]

ii) ಯೆಹೊದಿಗಳ ದೇವಾಲಯ ( ರೋಮನ್ನರಿಂದ ಕ್ರಿ.ಶ 70 ರಲ್ಲಿ) ನಾಶವಾಗುವತನಕ ದೋಷಪರಿಹಾರಕ ಮಹಾದಿನದ ಕಾರ್ಯಫಲ ನೆರವೇರಲಿಲ್ಲ ಎಂದು ನಿಮಗನ್ನಿಸುತ್ತದೆಯೇ? [ಇದು ಹಾಗೆ ಸೂಚಿಸುತ್ತದೆ? ಅಥವಾ ಈ ಸಮಯ ಬರುವವರೆಗೆ ಏನು ನಡೆಯುತ್ತಿದೆ ಎಂಬುದು ಮಾನವರಿಗೆ ಅರ್ಥವಾಗಲಿಲ್ಲ ಎಂಬ ಸಲಹೆಯನ್ನು ನೀಡುತ್ತದೆ ]

ಆ) ಇಬ್ರಿಯ 9:9–10 ನ್ನು ಓದಿಕೊಳ್ಳಿ ಇದು ಹೇಗೆ ಸಾಧ್ಯ? ದೊಷಪರಿಹಾರಕ ವಿಧಿವಿಧಾನಗಳು ಪಾಪಪರಿಹಾರ ಹೇಗೆ ಮಾಡಿದವು ಮತ್ತು ಅಂತ್ಯದಲ್ಲಿ ಪಾಪ ಹೇಗೆ ಅಡವಿಗೆ ಅಟ್ಟಲ್ಪಟ್ಟಿತು ಎಂಬುದನ್ನು ಈಗತಾನೇ ನಾವು ಕಲಿತೆವು ಇಬ್ರಿಯರ ಪತ್ರಿಕೆ ಹಾಗೇನೂ ಆಗಲಿಲ್ಲ ಎಂದೂ ಹೇಳುತ್ತದೆಯೇ? [ ಇಬ್ರಿಯ 9 : 9 " ಆ ಗುಡಾರವು ಈಗಿನ ಕಾಲದವರಿಗೋಸ್ಕರ ಒಂದು ಒಳಗಣ ಅರ್ಥವನ್ನು ಸೂಚಿಸುತ್ತದೆ" ಎಂದು ಹೇಳುತ್ತದೆ ಇಡೀ ಗುಡಾರ ವ್ಯವಸ್ಥೆ ನಮಗೊಂದು ಅಧ್ಯಾತ್ಮಿಕ ಪಾಠ ಕಲಿಸುತ್ತದೆ.]

i) "ಹೊಸ ವ್ಯವಸ್ಥೆ" ಯಾವುದು?

ಇ) ಇಬ್ರಿಯ 9 : 11 ನ್ನು ಓದಿಕೊಳ್ಳಿ "ಕೈಯಿಂದ ಕಟ್ಟಲ್ಪಡದಂಥ " ಅಂದರೆ ಈ ಸೃಷ್ಟಿಗೆ ಸಂಬಂಧ ಪಡದಂಥ" ಆ ಗುಡಾರ ಯಾವುದು? [ಇಬ್ರಿಯ 8 : 5 ಮತ್ತು ವಿ. ಕಾ 25 : 8–9 ನ್ನು ಓದಿಕೊಳ್ಳಿ ಈ ಭೂಮಿಯ ಮೇಲೆ ನಿರ್ಮಿಸಬೇಕಾದ ಗುಡಾರ ಹೇಗಿರಬೇಕೆಂಬದನ್ನು ದೇವರು ಮೋಶೆಗೆ ತೋರಿಸಿದರು ಆ ಗುಡಾರ ಪರಲೋಕದಲ್ಲಿತ್ತು. ಈ ಭೂಮಿಯ ಮೇಲೆ ತೊಡಗಬೇಕಾಗಿದ್ದ " ಹೊಸ ವ್ಯವಸ್ಥೆ" ಮತ್ತು " ಮಾದರಿ" ಈಗಾಗಲೇ ಪರಲೋಕದಲ್ಲಿ ಇರುವುದನ್ನೆ ಹೋಲಬೇಕಾಗಿತ್ತು.

1) ಒಂದು ನಿಮಿಷ ತಡೆಯಿರಿ ಆ ಹೋತ ಯೇಸುಸ್ವಾಮಿಯ ಸಂಕೇತ ಎಂದುಕೊಡಿದ್ದೆ ಯೇಸುಸ್ವಾಮಿ ಮಹಾಯಾಜಕ ನಾಗಿರ ಬೇಕಾಗಿದ್ದರೆ, ಅವರು ಬಲಿಯಾಗಲಿರುವ ಹೋತವೂ ಆಗುವುದು ಹೇಗೆ? [ ಇಬ್ರಿಯ 9: 12 ನ್ನು  ಓದಿರಿ ಈ ಹೊಸ ವ್ಯವಸ್ಥೆಯಲ್ಲಿ, ಯೇಸುಸ್ವಾಮಿ ಮಹಾಯಾಜಕ ಹಾಗೂ ಹೋತ ಎರಡೂ ಅವರೇ ಆಗಿದ್ದಾರೆ.]

ಈ) ಇಬ್ರಿಯ 9:13 ನ್ನು ಓದಿಕೊಳ್ಳಿ ಯೇಸುಸ್ವಾಮಿ ನಮಗಾಗಿ ಪರಲೋಕದ ಗುಡಾರದಲ್ಲಿ ಏನು ಮಾಡುತ್ತಿದ್ದಾರೆ? [ನಮ್ಮ ಪಾಪಗಳಿಗಾಗಿ ತಮ್ಮ ಸ್ವಂತ ರಕ್ತವನ್ನು ಬಳಸಿಕೊಂಡು ದೋಷಪರಿಹಾರ  ಮಾಡುತ್ತಿದ್ದಾರೆ ಇದೇ "ಹೊಸ ವ್ಯವಸ್ಥೆ"]

ಉ) ಇಬ್ರಿಯ 9 : 23–26 ನ್ನು ಓದಿಕೊಳ್ಳಿ ಈ ಅಧ್ಯಾಯದಲ್ಲಿರುವ ಸಮಾನ ಸಂಗತಿಗಳನ್ನು ಗಮನಿಸಿ ಮಾನವರು ಮಡಿಯುತ್ತಾರೆ ಮತ್ತು ನಂತರದಲ್ಲಿ ದೇವರ ನ್ಯಾಯತೀರ್ಪನ್ನು ಎದುರಿಸುತ್ತಾರೆ ಯೇಸುಸ್ವಾಮಿ ನಮ್ಮ ದೋಷಗಳ ಪರಿಹಾರಕ್ಕಾಗಿ ಮಡಿದರು ಮತು ನಮ್ಮನ್ನು ರಕ್ಷಿಸುವ ಸಲುವಾಗಿ ಮತ್ತೆ ಬರಲಿದ್ದಾರೆ. ಇದನ್ನೆಲ್ಲಾ ಯೇಸುಸ್ವಾಮಿ ಯಾವಾಗ ಮಾಡುತ್ತಾರೆ? [ ಇದು ಯೇಸುಸ್ವಾಮಿಯವರ  ಎರಡನೇ ಬರೋಣವನ್ನು ಕುರಿತದ್ದು! ಸಮಯವನ್ನು ಕುರಿತು ಇಲ್ಲಿ ನೀವು ಕಲಿಯುವುದೇನು? ಯೇಸುಸ್ವಾಮಿ ಈ ಲೋಕಕ್ಕೆ ಬಂದಿದ್ದರು: ಒಂದು ಪರಿಪೂರ್ಣ ಜೀವನವನ್ನು ಜೀವಿಸಿದ್ದರು ಈ ಲೋಕಕ್ಕೆ ಬಂದಿದ್ದರು: ಒಂದು ಪರಿಪೂರ್ಣ ಜೀವವನ್ನು ಜೀವಿಸಿದ್ದರು: ನಾವು ಸಾಯಬೇಕಾಗಿದ್ದ ಆ ಸ್ಥಳದಲ್ಲಿ ಅವರು ಮರಣಿಸಿದರು  ನಂತರ ಪುನರುತ್ಥಾನಗೊಂಡರು ಪರಲೋಕಕ್ಕೆ ಹಿಂತಿರುಗಿ ಹೋದರು ನಮಗಾಗಿ ದೋಷಪರಿಹಾರ ಮಾಡುವ ಪರಲೋಕದ ಗುಡಾರವನ್ನು  ಸ್ವಂತ ರಕ್ತದಿಂದ ಪ್ರವೇಶಿಸಿದರು ಪರಲೋಕದ ದೋಷಪರಿಹಾರಕ ಮಹಾದಿನದಂದು ಅವರು ಪಾಪವನ್ನು  ತೊಲಗಿಸುವರು. ಆನಂತರದಲ್ಲಿ ಅವರು

ಭೂಲೋಕಕ್ಕೆ ಬಂದು ನಮ್ಮನ್ನು ಅವರ ಮನೆಗೆ ಕರೆದೊಯ್ಯುವರು ನಮ್ಮ ಪಾಪಗಳು ತೊಳೆಯ್ಪಟ್ಟು ನಾವು ಪರಿಶುದ್ದರಾದಾಗ ನಾವು ದೇವರನ್ನು ಮುಖಾಮುಖಿಯಾಗಿ ನೋಡಬಹುದು ಮತ್ತು ಅವರೊಂದಿಗೆ ಜೀವಿಸಬಹುದು]

ಖು) ಇಂಥಹ ಒಳ್ಳೆಯ ಸುದ್ದಿಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು [ ಇಬ್ರಿಯ 10 : 19–22 ನ್ನು ಓದಿಕೊಳ್ಳಿರಿ ಮೊದಲನೆಯದಾಗಿ, ನಮ್ಮ ರಕ್ಷಣೆಯ ಬಗ್ಗೆ ನಮಗೆ ನಂಬಿಕೆಯಿರಬೇಕು ಗುಡಾರದ ಅತಿಪರಿಶುದ್ದವಾದ ಸ್ಥಳವನ್ನು ಪಾಪಿಗಳು ಪ್ರವೇಶಿಸಿದಾಗ, ಅವರು ಕೂಡಲೆ ಸಾವನಪ್ಪುತ್ತಿದ್ದರು ಏಕೆಂದರೆ ಅವರು ದೇವರ ಸನ್ನಿಧಿಯನ್ನು ತಪ್ಪಾದ ರೀತಿಯಲ್ಲಿ ಪ್ರವೇಶ ಮಾಡುತ್ತಿದ್ದರು. ಯೇಸುಸ್ವಾಮಿ ನಮ್ಮ ಪಾಪಗಳನ್ನೆಲ್ಲಾ ಪರಿಹಾರ ಮಾಡುವುದರಿಂದ ನಾವು ದೈರ್ಯವಾಗಿ ಆತ್ಮವಿಶ್ವಾಸದಿಂದ ದೇವಸನ್ನಿಧಿಯನ್ನು ಪ್ರವೇಶಮಾಡಬಹುದಾಗಿದೆ.

ಖು) ಇಬ್ರಿಯ 10 : 23–25 ನ್ನು ಓದಿಕೊಳ್ಳಿ ಈ ಒಳ್ಳೆಯ ಸುದ್ದಿಗೆ ನಾವು ತೋರಬೇಕಾದ ಎರಡನೆ ಪ್ರತಿಕ್ರಿಯೆ ಏನು? [ ನಂಬಿಗಸ್ಥರಾದ ಬಾಳ್ವೆಯನ್ನು ನಡೆಸಬೇಕು ಇಲ್ಲಿನ ಸಂದೇಶಗಳನ್ನು ನಾವು ನಂಬಬೇಕು ಈ ಭೂಮಿಯ ಮೇಲಿದ್ದ ಗುಡಾರ, ದೇವರು ನಮ್ಮ ಪಾಪಗಳನ್ನು ಪರಿಹರಮಾಡುವ ಮಾದರಿಯಾಗಿತ್ತು ಇಂಥಹ ಗುಡಾರ ಸಾಂಕೇತಿಕವಾಗಿ ಯೇಸುಸ್ವಾಮಿ ಹೇಗೆ ನಮ್ಮ ಮೆಸ್ಸೀಯನಾಗಿದ್ದಾರೆ ಎಂಬುದನ್ನು ಪ್ರಕಟಿಸುತ್ತಿತ್ತು ಈಗ ಯೇಸುಸ್ವಾಮಿ ನಮಗಾಗಿ ಏನುಮಾಡುತ್ತಿದ್ದಾರೆ ಎಂಬುದನ್ನು ತಿಳಿಸುತ್ತಿತ್ತು ನಾವು ಈ ಸಂದೇಶಕ್ಕೆ ಬದ್ಧರಾಗಿರಬೇಕು ನಾವು ಒಳ್ಳೆಯ ಕೆಲಸಗಳನ್ನು ಮಾಡಿ ಇತರರನ್ನು ಒಳ್ಳೆಯ ಕೆಲಸ ಮಾಡಲು ಹುರಿದುಂಬಿಸಬೇಕು. ಅರಾಧನೆಯಲ್ಲಿ ಒಟ್ಟುಗೂಡಬೇಕು ಮತ್ತು ನಮಗಿರುವ ನಿರೀಕ್ಷೆಯನ್ನು ಇತರರೊಂದಿಗೆ ಹಂಚಿಕೊಳ್ಳಬೇಕು]

ಎ) ಪರಲೋಕದ ಗುಡಾರದಲ್ಲಿ ಯೇಸುಸ್ವಾಮಿ ನಿನಗಾಗಿ ನಿಂತುಕೊಂಡಿದ್ದಾರೆ ಎಂಬುದು ಈಗಲಾದರೂ ನಿನಗೆ ಖಚಿತವಾಯಿತೇ ನನ್ನ ಸ್ನೇಹಿತನೇ? ಯೇಸುಸ್ವಾಮಿ ನಿನ್ನ ದೋಷಪರಿಹಾರ ಮಾಡುವ ಸಲುವಾಗಿ ಬಲಿಪಶುವದರೆಂಬುದು ಈಗಲಾದರೂ ನಿನಗೆ ಗೋಚರವಾಯಿತೆ? ಹಾಗಾದರೆ ಪರಿಶುದ್ಧ ಜೀವನ ಸಾಗಿಸಲು ಈಗ ಒಡಂಬಡುವಿಯಾ?

## ಮುಂದಿನವಾರ :

## ಸ್ತ್ರೀಯ ಮೂಲದ ಜನನ – ದೋಷಪರಿಹಾರ ಮತ್ತು ನರಾವತಾರ